KACM210040672022

| |
|---|
| ನಮೂನೆ ನಂ.9 (ದಿವಾನಿ) ದಾವೆಗಳ ತೀರ್ಪಿನ ಶೀರ್ಷಿಕೆ ಪುಟ (ಆರ್.ಪಿ.91) |

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕಡೂರು.

ದಿನಾಂಕ **15** ನೇ ಮಾಹೆ ಜೂನ್ **2026**

ಃ ಉಪಸ್ಥಿತರು ಃ

ಶ್ರೀ ಮಂಜುನಾಥಚಾರಿ ಡಿ.ಕೆ., ಬಿ.ಎ. ಎಲ್.ಎಲ್.ಬಿ.
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಕಡೂರು.

# ಅಸಲು ದಾವಾ ಸಂಖ್ಯೆ.572/2022

ವಾದಿಃ
ಶ್ರೀ. ನಾಗರಾಜು
ಬಿನ್ ಭೈರೇಸಿದ್ದಯ್ಯ,
ವಯಸ್ಸು ಸುಮಾರು 54 ವರ್ಷ,
ವ್ಯವಸಾಯ, ವಾಸಃ ಗಣಪತಿಹಳ್ಳಿ ಗ್ರಾಮ,
ದೇವನೂರು ಅಂಚೆ, ಸಖರಾಯಪಟ್ಟಣ ಹೋಬಳಿ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪರವಾಗಿಃ ಶ್ರೀ ಡಿ.ಎಸ್., ವಕೀಲರು)

ವಿರುದ್ಧ

ಪ್ರತಿವಾದಿಃ
ತಹಶೀಲ್ದಾರ್,
ಕಡೂರು, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

(ಏಕತರ್ಪೀಯರಾಗಿರುತ್ತಾರೆ)

KACM210040672022

| | | |
|---|---|---|
| ದಾವಾ ಹೂಡಿದ ದಿನಾಂಕ | ಃ | 22.09.2022 |
| ದಾವಾ ಸ್ವರೂಪ | ಃ | ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | ಃ | 27.06.2023 |
| ತೀರ್ಪಿನ ದಿನಾಂಕ | ಃ | 15.06.2026 |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಸಮಯ | ಃ | ದಿನಗಳು ತಿಂಗಳು ವರ್ಷಗಳು<br>23 08 23 |

D K MANJUNATHACHARI

Digitally signed by D K MANJUNATHACHARI
Date: 2026.06.15 16:42:10 +0530

**(ಮಂಜುನಾಥಚಾರಿ ಡಿ. ಕೆ.)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

## ಃ ತೀರ್ಪು ಃ

ವಾದಿಯು ಈ ದಾವೆಯನ್ನು ದಾವಾ ಸ್ವತ್ತಿನ ಸಂಬಂಧವಾಗಿ ಶಾಶ್ವತ ನಿರ್ಬಂಧಕಾಜ್ಞೆ ಹಾಗೂ ಇತರ ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ.

**2.** ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ವಾದಿಯು ಸಲ್ಲಿಸಿರುವ ದಾವೆ ಏನೆಂದರೆ, ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿ, ಲಕ್ಷ್ಮೀಸಾಗರ ಗ್ರಾಮದಲ್ಲಿರುವ ಸರ್ವೆ ನಂಬರ್ 24 ವಿಸ್ತೀರ್ಣ 2 ಎಕರೆ 29 ಗುಂಟೆ ಸ್ವತ್ತು ಮೂಲತಃ ಸರ್ಕಾರಿ ಸ್ವತ್ತಾಗಿರುತ್ತದೆ. ಅದರ ಪೈಕಿ

KACM210040672022

0.28 ಗುಂಟೆ ವಿಸ್ತೀರ್ಣವನ್ನು ವಾದಿಯು ಸುಮಾರು 25 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಆಧಾರದ ಮೇಲೆ ಉಳುಮೆ ಮಾಡಿಕೊಂಡು ಬರುತ್ತಿರುತ್ತಾರೆ. ಸದರಿ ಸ್ವತ್ತು ದಾವಾ ಸ್ವತ್ತಾಗಿದ್ದು, ದಿನಾಂಕ 30.12.1998 ರಂದು ಸದರಿ ಸ್ವತ್ತನ್ನು ಅಧಿಕೃತಗೊಳಿಸಿಕೊಳ್ಳಲು ಬಗರ್ ಹುಕುಂ ಸಮಿತಿಗೆ ವಾದಿಯು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಹೀಗಿದ್ದಾಗ, ದಿನಾಂಕ 15.09.2022 ರಂದು ಪ್ರತಿವಾದಿಯು ದಾವಾ ಸ್ವತ್ತಿಗೆ ಅಪರಿಚಿತರಾಗಿ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ನೀಡಿದ್ದು, ಆದುದರಿಂದ ಪ್ರತಿವಾದಿ ಹಾಗೂ ಅವರ ಪರ ವ್ಯಕ್ತಿಗಳಿಂದ ದಾವಾ ಸ್ವತ್ತಿನಲ್ಲಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಕಿರುಕುಳ ಉಂಟಾಗದಂತೆ ಕೇಳಿ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ.

3. ಪ್ರತಿವಾದಿಯು ಏಕಪಕ್ಷೀಯರಾಗಿದ್ದಾರೆ.

4. ವಾದ ಪತ್ರ ಹಾಗೂ ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ನ್ಯಾಯಾಲಯದ ಗಮನಕ್ಕೆ ಉದ್ಭವಿಸುವ ಅಂಶಗಳೇನೆಂದರೆ:

<u>ವಿವಾದಾಂಶಗಳು</u>

1. ವಾದಿಯು ತಾನು ದಾವಾ ಸಲ್ಲಿಸಿದ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ಶಾಂತಿಯುತ ಮತ್ತು ಕಾನೂನುಬದ್ಧ ಸ್ವಾಧೀನಾನುಭವ ಹೊಂದಿರುವುದಾಗಿ ರುಜುವಾತುಪಡಿಸುವರೇ?

2. ವಾದಿಯು, ದಾವಾ ಸ್ವತ್ತಿನಲ್ಲಿನ ಸ್ವಾಧೀನಾನುಭವಕ್ಕೆ ಪ್ರತಿವಾದಿಯು ಕಿರುಕುಳಕಾರಿಯಾಗಿ ವರ್ತಿಸಿದ್ದಾರೆ ಎಂಬುದನ್ನು ರುಜುವಾತುಪಡಿಸುವರೆ?

3. ವಾದಿಯು ತಾನು ಕೇಳಲಾದ ಪರಿಹಾರಕ್ಕೆ ಅರ್ಹರೆ?

4. ಹಾಗಾದರೆ ಏನು ಆದೇಶ ಅಥವಾ ಡಿಕ್ರಿ?

5. ಮೇಲಿನ ಅಂಶಗಳನ್ನು ರುಜುವಾತು ಪಡಿಸುವ ಸಲುವಾಗಿ ವಾದಿಯು ತನ್ನನ್ನು ವಾ.ಸಾ-1(ಪಿ.ಡಬ್ಲ್ಯೂ-1) ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ವಾ.ಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ, ನಿಪಿ-1 ರಂತೆ ಸರ್ವೆ ನಂ.24 ರಂತೆ ಲಕ್ಷ್ಮೀಸಾಗರ ಗ್ರಾಮದ ಪಹಣಿ ಪತ್ರಿಕೆಯನ್ನು, ನಿಪಿ-2 ಮತ್ತು 3 ರಂತೆ ಸಖರಾಯಪಟ್ಟಣ ಹೋಬಳಿ, ಲಕ್ಷ್ಮೀಸಾಗಾರ ಗ್ರಾಮದ ಸರ್ವೆ ನಂ.24 ರ ಎರಡು ಪಹಣಿಗಳ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-4 ಮತ್ತು 5 ರಂತೆ ಸಖರಾಯಪಟ್ಟಣ ಹೋಬಳಿ, ಲಕ್ಷ್ಮೀಸಾಗಾರ ಗ್ರಾಮದ ಸರ್ವೆ ನಂ.24 ರ 1987 ರಿಂದ 1989 ರ ಪಹಣಿಗಳ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-6 ರಂತೆ ಎಂ.ಆರ್.ಸಂ.6/1998-99 ರ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-7 ರಂತೆ ರೆಕಾರ್ಡ್ ಆಫ್ ರೈಟ್ಸ್ ನ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-8 ರಂತೆ ನಕಾಶೆಯ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-9 ರಂತೆ

KACM210040672022

ಜಿಲ್ಲಾಧಿಕಾರಿ, ಚಿಕ್ಕಮಗಳೂರು ರವರಿಗೆ ಸಲ್ಲಿಸಿದ ಅರ್ಜಿಯ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-10 ರಂತೆ ತಹಶೀಲ್ದಾರ್ ರವರಿಗೆ ಸಲ್ಲಿಸಿದ ಅರ್ಜಿಯ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-11 ಮತ್ತು 12 ರಂತೆ ಉಪವಿಭಾಗಾಧಿಕಾರಿ, ತರೀಕೆರೆ ರವರಿಗೆ ಸಲ್ಲಿಸಿದ ಅರ್ಜಿ ಮತ್ತು ಆರ್.ಐ ರವರು ನನಗೆ ನೀಡಿದ ತಿಳುವಳಿಕೆ ಪತ್ರದ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-13 ರಂತೆ ಕನ್ನಡಪ್ರಭ ಪತ್ರಿಕೆಯ ಕೋರ್ಟ್ ದೃಢೀಕೃತ ನಕಲನ್ನು, ನಿಪಿ-14 ರಿಂದ 17 ರಂತೆ ದಾವಾ ಆಸ್ತಿಯ 4 ಫೋಟೋಗಳು ಮತ್ತು ನಿಪಿ-18 ರಂತೆ ಸಿಡಿಯನ್ನು ಗುರುತಿಸಿಕೊಂಡಿರುತ್ತಾರೆ.

6. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದ-ವಿವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

ವಿವಾದಾಂಶ 1 - ನಕಾರಾತ್ಮಕವಾಗಿ

ವಿವಾದಾಂಶ 2 - ನಕಾರಾತ್ಮಕವಾಗಿ

ವಿವಾದಾಂಶ 3 - ನಕಾರಾತ್ಮಕವಾಗಿ

ವಿವಾದಾಂಶ 4 - ಅಂತಿಮ ಆದೇಶದಂತೆ,

KACM210040672022

ಕಾರಣಗಳು

7. **ಅಂಶ 1 ರಿಂದ 3** :: ವಾದಿಯು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿನಲ್ಲಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ನೀಡಬಾರದೆಂದು ನಿರ್ಬಂಧಕಾಜ್ಞೆ ಆದೇಶ ಕೋರಿ ಈ ದಾವೆಯನ್ನು ಸಲ್ಲಿಸಿದ್ದಾರೆ.

8. ವಾದಿಯು ತನ್ನ ವಾದಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಸರ್ವೆ ನಂ.24 ರಲ್ಲಿ ವಿಸ್ತೀರ್ಣ 2 ಎಕರೆ 29 ಗುಂಟೆ ಪೈಕಿ 1 ಎಕರೆ ಸ್ವತ್ತನ್ನು ಸಕ್ರಮಗೊಳಿಸುವ ಬಗ್ಗೆ ನಮೂನೆ - 53 ನ್ನು ಬಗರ್ ಹುಕುಂ ಸಮಿತಿಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಹಾಗಾಗಿ ದಾವಾ ಸ್ವತ್ತು ಸರ್ಕಾರಿ ಸ್ವತ್ತಾಗಿರುವುದು ಕಂಡುಬರುತ್ತದೆ. ಬಹುಮುಖ್ಯವಾಗಿ ವಾದಿಯು ತಾನು ಸರ್ವೆ ನಂ.24 ರ ವಿಸ್ತೀರ್ಣ 2 ಎಕರೆ 29 ಗುಂಟೆ ಪೈಕಿ 0.28 ಸ್ವತ್ತಿನಲ್ಲಿ ಅನಧೀಕೃತ ಸಾಗಾವಳಿ ಹೊಂದಿರುವುದಾಗಿ ತಿಳಿಸಿದ್ದರೂ ಸಹ ಮುಂದುವರೆದು ತಾನು ವಿಸ್ತೀರ್ಣ 1 ಎಕರೆ ಸಂಬಂಧ ಪ್ರದೇಶವನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿಕೊಂಡಿರುತ್ತಾರೆ. ಹಾಗಾಗಿ ವಾದಿಯು ಎಷ್ಟು ವಿಸ್ತೀರ್ಣದಲ್ಲಿ ತಾನು ಸ್ವಾಧೀನ ಹೊಂದಿದ್ದೆ ಎಂಬುದರಲ್ಲಿ ಸ್ಪಷ್ಟತೆ ಹೊಂದಿಲ್ಲದೇ ಇರುವುದು ಕಂಡುಬಂದಿದೆ.

9. ವಾದಿ / ಪಿ.ಡಬ್ಲ್ಯೂ-1 ರವರು ದಾವಾ ಸ್ವತ್ತಿಗೆ ಸಂಬಂಧಿಸಿ ನಿಪಿ-2 ಮತ್ತು 3 ರಂತೆ ಗಣಕೀಕೃತ ಪಹಣಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪಹಣಿಯ ಕಲಂ 9 ರಲ್ಲಿ 'ಶೇಂದಿವನ ಬಿ ಹಿಂದುಳಿದ ಸ್ಮಶಾನಕ್ಕಾಗಿ' ಎಂದು ನಮೂದಾಗಿರುತ್ತದೆ. ಆದುದರಿಂದಾಗಿ ವಾದಿಯು ಹಾಜರುಪಡಿಸಿರುವ ದಾಖಲೆಗಳಿಂದ ದಾವಾ ಸ್ವತ್ತು ಸ್ಮಶಾನಕ್ಕಾಗಿ ಮೀಸಲಿಟ್ಟ ಸರ್ಕಾರಿ ಸ್ವತ್ತಾಗಿರುವುದಕ್ಕೆ ಬೆಳಕು ಚೆಲ್ಲುತ್ತದೆ. ಹಾಗಾಗಿ ಸ್ಮಶಾನಕ್ಕೆ ಮೀಸಲಿಟ್ಟ ಸ್ವತ್ತಿನಲ್ಲಿ ವಾದಿಯು ಸ್ವಾಧೀನ ಹೊಂದಿದ್ದಾರೆಂದು ಕಲ್ಪಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ಪ್ರಸ್ತುತ ಪ್ರಕರಣದ ಸನ್ನಿವೇಶಕ್ಕೆ ಗೌರವಾನ್ವಿತ ಘನ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 22.09.2005 ರಂದು ರಿಟ್ ಅರ್ಜಿ ಸಂಖ್ಯೆ 14048/2005 ರ ತೀರ್ಪಿನ ಖಂಡಿಕೆ 23 ರಲ್ಲಿ ಈ ಕೆಳಕಂಡ ಅಂಶಗಳನ್ನು ಉಲ್ಲೇಖಿಸಿದ್ದು ಪರಿಗಣಿಸಬಹುದು.

> *23. Respondents are directed to take further action in accordance with law in pursuance of the notices they have issued to the petitioners. It is specifically made clear that a writ of mandamus cannot be issued from this Court to direct the respondents to regularise any unauthorised cultivation of any gomal*

*land or any other reserved land which has been reserved under the provisions of Section 69 of the Karnataka Land Revenue Act. No writ lies for issuing directions to the Government or the officials of the Government to compel them to act contrary to the statutory provisions. Respondents are directed to ensure that if any standing crop was there, it is harvested and the proceeds given to such persons who had raised the crop and to ensure that henceforth the land is retained as a gomal land; that no unauthorized encroachments are allowed on the land and land is preserved for the common utility of the community of the village. It is hereby directed that the respondents are bound to maintain the land as gomal land.*

ಆದುದರಿಂದ, ಘನ ಕರ್ನಾಟಕ ಉಚ್ಚ ನ್ಯಾಯಾಲಯವು ಮೇಲಿನ ತೀರ್ಪಿನಲ್ಲಿ ಸರ್ಕಾರವು ಕೆಲವು ಉದ್ದೇಶಗಳಿಗಾಗಿ ಮೀಸಲಿಟ್ಟ ಭೂಮಿಯನ್ನು ಆ ಉದ್ದೇಶಗಳಿಗಾಗಿಯೇ

ಉಳಿಸಿಕೊಳ್ಳಲು ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಅಲ್ಲದೇ, ಮೀಸಲಿಟ್ಟ ಭೂಮಿಯನ್ನು ಇತರೆ ವ್ಯಕ್ತಿಗಳು ಸ್ವಾಧೀನಾನುಭವದ ಆಧಾರದ ಮೇಲೆ ಅಧಿಕೃತಗೊಳಿಸಿಕೊಳ್ಳಲು ಬರುವುದಿಲ್ಲವೆಂದು ಉಲ್ಲೇಖಿಸಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ವಾದಿಯು ಸ್ಮಶಾನಕ್ಕೆ ಮೀಸಲಿಟ್ಟ ಭೂಮಿಯನ್ನು ಅಧಿಕೃತಗೊಳಿಸಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವ ಸಂಗತಿಯು ಕಾನೂನು ರೀತಿ ಅನುರ್ಜಿತವಾಗಿರುತ್ತದೆ. ಅಲ್ಲದೇ, ದಾವಾ ಸ್ವತ್ತು ಸ್ಮಶಾನಕ್ಕೆ ಮೀಸಲಿಟ್ಟ ಭೂಮಿಯಾಗಿದ್ದು, ಆದುದರಿಂದ ವಾದಿಯು ಸ್ಮಶಾನಕ್ಕೋಸ್ಕರ ಉದ್ದೇಶಿಸಲ್ಪಟ್ಟ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದರೂ ಸಹ ಅದು ಅನಧಿಕೃತ ಸ್ವಾಧೀನವಾಗಿರುತ್ತದೆ. ಶಾಸನ ಉದ್ದೇಶಿತ ಸ್ಮಶಾನದಲ್ಲಿ ವಾದಿಯು ಸ್ವಾಧೀನಾನುಭವವನ್ನು ಸಾಧಿಸಲು ಬರುವುದಿಲ್ಲ. ಆದುದರಿಂದ, ಪ್ರತಿವಾದಿಯು ವಾದಿಯ ಸ್ವಾಧೀನಾನುಭವಕ್ಕೆ ಕಿರುಕುಳ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದುದರಿಂದ ವಿವಾದಾಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**10**. <u>ವಿವಾದಾಂಶ **4:**</u> ಈ ಮೇಲಿನ ವಿವಾದಾಂಶ 1 ರಿಂದ 3 ರಲ್ಲಿ ಚರ್ಚಿಸಿದ ಕಾರಣಕ್ಕಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ:

KACM210040672022

<u>ತೀರ್ಪು</u>

ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಆದೇಶಕ್ಕನುಸಾರವಾಗಿ ಡಿಕ್ರಿ ಬರೆಯಲು ಸೂಚಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 15.06.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)

D K MANJUNATHACHARI

Digitally signed by D K MANJUNATHACHARI
Date: 2026.06.15 16:42:20 +0530

**(ಡಿ ಕೆ ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
ಕಡೂರು.

<u>ಅನುಬಂಧಗಳ ಪಟ್ಟಿ</u>

**1)** <u>ವಾದಿಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:-</u>

ವಾ.ಸಾ - 1 - ಶ್ರೀ. ನಾಗರಾಜು.

**2)** <u>ವಾದಿಯ ಪರ ನಿಶಾನೆಯಾದ ದಾಖಲೆಗಳ ಪಟ್ಟಿ:-</u>

ನಿಪಿ-1 - ಸರ್ವೆ ನಂ.24 ರಂತೆ ಲಕ್ಷ್ಮೀಸಾಗರ ಗ್ರಾಮದ ಪಹಣಿ ಪತ್ರಿಕೆ.

KACM210040672022

ನಿಪಿ-2-3 - ಸಖರಾಯಪಟ್ಟಣ ಹೋಬಳಿ, ಲಕ್ಷ್ಮೀಸಾಗಾರ ಗ್ರಾಮದ ಸರ್ವೆ ನಂ.24 ರ ಎರಡು ಪಹಣಿಗಳ ಕೋರ್ಟ್ ದೃಢೀಕೃತ ನಕಲು.

ನಿಪಿ-4-5 - ಸಖರಾಯಪಟ್ಟಣ ಹೋಬಳಿ, ಲಕ್ಷ್ಮೀಸಾಗಾರ ಗ್ರಾಮದ ಸರ್ವೆ ನಂ.24 ರ 1987 ರಿಂದ 1989 ರ ಪಹಣಿಗಳ ಕೋರ್ಟ್ ದೃಢೀಕೃತ ನಕಲು.

ನಿಪಿ-6 - ಎಂ.ಆರ್.ಸಂ.6/1998-99 ರ ಕೋರ್ಟ್ ದೃಢೀಕೃತ ನಕಲು.

ನಿಪಿ-7 - ರೆಕಾರ್ಡ್ ಆಫ್ ರೈಟ್ಸ್ ನ ಕೋರ್ಟ್ ದೃಢೀಕೃತ ನಕಲು.

ನಿಪಿ-8 - ನಕಾಶೆಯ ಕೋರ್ಟ್ ದೃಢೀಕೃತ ನಕಲು.

ನಿಪಿ-9 - ಜಿಲ್ಲಾಧಿಕಾರಿ, ಚಿಕ್ಕಮಗಳೂರು ರವರಿಗೆ ಸಲ್ಲಿಸಿದ ಅರ್ಜಿಯ ಕೋರ್ಟ್ ದೃಢೀಕೃತ ನಕಲು.

ನಿಪಿ-10 - ತಹಶೀಲ್ದಾರ್ ರವರಿಗೆ ಸಲ್ಲಿಸಿದ ಅರ್ಜಿಯ ಕೋರ್ಟ್ ದೃಢೀಕೃತ ನಕಲು.

ನಿಪಿ-11-12 - ಉಪವಿಭಾಗಾಧಿಕಾರಿ, ತರೀಕೆರೆ ರವರಿಗೆ ಸಲ್ಲಿಸಿದ ಅರ್ಜಿ ಮತ್ತು ಆರ್.ಐ ರವರು ನನಗೆ ನೀಡಿದ ತಿಳುವಳಿಕೆ ಪತ್ರದ ಕೋರ್ಟ್ ದೃಢೀಕೃತ ನಕಲು.

ನಿಪಿ-13 - ಕನ್ನಡಪ್ರಭ ಪತ್ರಿಕೆಯ ಕೋರ್ಟ್ ದೃಢೀಕೃತ ನಕಲು.

ನಿಪಿ-14-17 - ದಾವಾ ಆಸ್ತಿಯ 4 ಫೋಟೋಗಳು

ನಿಪಿ-18 - ಸಿಡಿ.

KACM210040672022

**3)** ಪ್ರತಿವಾದಿಗಳ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:- ಇರುವುದಿಲ್ಲ.

**4)** ಪ್ರತಿವಾದಿಗಳ ಪರ ನಿಶಾನೆಯಾದ ದಾಖಲೆಗಳ ಪಟ್ಟಿ:- ಇರುವುದಿಲ್ಲ.

D K MANJUNATHACHARI
Digitally signed by D K MANJUNATHACHARI
Date: 2026.06.15 16:42:29 +0530

**(ಡಿ ಕೆ ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
ಕಡೂರು.